**3** ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**C.C. No.2583/2023**

**CW- 1** **PW:1**

ದಿಃ **28.10.2024.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು**.**

**ಮುಂದುವರೆದ ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ**

ದಿಃ 25.08.2023 ರಂದು ನಾನು ನಿಪಿ.2 ರ ಪ್ರಕಾರ ಪೊಲಿಸರಿಗೆ ನೀಡಿದ ಎರಡು ಸೀಲ್ ಹಾಗೂ ಒಂದು letter head ಹಾಗೂ 36 ಮಾದರಿ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಹಂತದಲ್ಲಿ ಜೂನ್ 21 ರ ಇಂಡೊಸ್ಟಾರ್ ಕ್ಯಾಪಿಟಲ್ ಫೈನಾನ್ಸ ಲೆಟರ್ ಹೆಡ್ ಹೊಂದಿರುವ ಪತ್ರವನ್ನು ನಿಪಿ.16 ಎಂದು ಗುರುತಿಸಲಾಯಿತು. ಈ ಹಂತದಲ್ಲಿ S-2 ಎಂದು ಗುರುತಿಸಲಾದ Indostar Capital Finance Limited ಎಂಬ ಸೀಲನ್ನು ತೆರೆದ ನ್ಯಾಯಾಲಯದಲ್ಲಿ ಬಿಳಿಯ ಹಾಳೆಯ ಮೇಲೆ ಮಸಿಯ ಮುಖಾಂತರ ಮುದ್ರಿಸಿ ನೋಡಿ ಅದರ ಮೇಲೆ Indostar Capital Finance Limited ಎಂದು ಬರೆದಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು. ಈ ಹಂತದಲ್ಲಿ S-3 ಎಂದು ಗುರುತಿಸಲಾದ For Indostar Capital Finance Limited authorized signature ಎಂಬ ಸೀಲನ್ನು ತೆರೆದ ನ್ಯಾಯಾಲಯದಲ್ಲಿ ಬಿಳಿಯ ಹಾಳೆಯ ಮೇಲೆ ಮಸಿಯ ಮುಖಾಂತರ ಮುದ್ರಿಸಿ ನೋಡಿ ಅದರ ಮೇಲೆ For Indostar Capital Finance Limited authorized signature ಎಂದು ಬರೆದಿದ್ದು ಅದನ್ನು ಮು ಮಾ 2 ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ಎಫ್ ಎಸ್ ಎಲ್ ಕಳುಹಿಸಿ ಪಡೆಯಲಾದ ಪ್ರಾಸಾಃ 3 ಇವರ ಮಾದರಿ ಸಹಿಗಳನ್ನು ನಾನು ಸಂಗ್ರಹಿಸಿ ಎ ಪಿ ಎಂ ಸಿ ನವನಗರ ಪೊಲಿಸ್ ಠಾಣೆ ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ ಮಾದರಿ ಸಹಿಗಳನ್ನು ಹೊಂದಿರುವ ಸದರಿ ದಾಖಲೆಗಳನ್ನು ನಿಪಿ.17 ಎಂದು ಗುರುತಿಸಲಾಯಿತು. ನಿಪಿ.2 ಪಂಚನಾಮೆಯನ್ನು ನವನಗರ ಪೊಲಿಸ್ ಠಾಣೆಯಲ್ಲಿ ಬೆಳಿಗ್ಗೆ 11.30 ರಿಂದ 12.30 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ. ಸದರಿ ಸಮಯದಲ್ಲಿ ನಿಪಿ.3 ಮತ್ತು 4 ರ ಪ್ರಕಾರ ಪೊಟೊ ತೆಗೆದಿರುತ್ತಾರೆ ಎಂದರೆ ಸರಿ.

**ಪಾಟಿಸವಾಲುಃ ಆರೋಪಿ ನಂ.1 ಪರ ವಕೀಲರಿಂದಃ**

ದಿಃ 08.01.2024 ರಂದು ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ನನ್ನ ಮುಖ್ಯ ವಿಚಾರಣೆ ಆಗಿರುತ್ತದೆ ಎಂದರೆ ಸರಿ. ನಾನು ಈಗಲೂ ಸಹ Indostar Capital Finance Limited ಕಂಪನಿಯಲ್ಲಿಯೆ ಕೆಲಸ ಮಾಡುತ್ತಿದ್ದೇನೆ. ಈ ಪ್ರಕರಣದಲ್ಲಿ ಇನ್ನೊಬ್ಬ ಮ್ಯಾನೇಜರ್ ಕಂಪನಿಯ ಪರವಾಗಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸಾಕ್ಷಿ ಅವರು ಏರಿಯಾ ಮ್ಯಾನೇಜರ್ ಹಾಗೂ ಘಟನೆ ನಡೆದ ಸಮಯದಲ್ಲಿ ಇದ್ದ ಹಾಗೂ ಸಾಕ್ಷಿ ನುಡಿದಿರುತ್ತಾರೆ. ಮು ಮಾ 1 ಮತ್ತು 2 ಗಳನ್ನು ದೋಷಾರೋಪಣ ಪಟ್ಟಿಯ ಜೊತೆ ತನಿಖಾಧಿಕಾರಿಯವರು ನೀಡಿಲ್ಲ ಹಾಗೂ ನಾವೇ ನೀಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತನಿಖಾಧಿಕಾರಿಯವರಿಗೆ ಸದರಿ ಸೀಲಗಳನ್ನು ನಾವೇ ನೀಡಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ಕಂಪನಿಯ ಕಡೆಯಿಂದ ಅಸಲಿ ಹಾಗೂ ನಕಲಿ ಎರಡು ಮುದ್ರೆಗಳನ್ನು ಸಹ ಪೊಲೀಸರು ಜಪ್ತಿ ಪಡಿಸಿರುತ್ತಾರೆ. ಆದರೆ ಅವರೆಡುಗಳನ್ನು ನಕಲಿ ಸೀಲನ್ನು ಹಾಜರುಪಡಿಸಿರುತ್ತಾರೊ ಇಲ್ಲ ಎಂದು ನನಗೆ ಗೊತ್ತಿಲ್ಲ. ಸೀಲಗಳನ್ನು Stamp vendor ತಯಾರಿಸುತ್ತಾರೆ ಎಂದರೆ ಸರಿ. ಮು ಮಾ 1 ಮತ್ತು 2 ನಮ್ಮ ಕಂಪನಿಯ ಮುಖ್ಯ ಕಚೇರಿಯಿಂದ ಬಂದಿರುತ್ತವೆ. ಮು ಮಾ 1 ಮತ್ತು 2 ನಿಮ್ಮ ಕಂಪನಿಯ ಮುಖ್ಯ ಕಚೇರಿಯಿಂದ ಬಂದಿರುತ್ತವೆ ಎಂದು ತೋರಿಸಲು ನೀವು ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಬೇಕಾದಲ್ಲಿ ಅದನ್ನು ಸಹ ಹಾಜರುಪಡಿಸುತ್ತೇವೆ ಎಂದು ನುಡಿಯುತ್ತಾರೆ.

2. ಮು ಮಾ 1 ಮತ್ತು 2 ರಂತಹ ಸೀಲಗಳು ಸಾಮಾನ್ಯವಾಗಿ ಮಾರುಕಟ್ಟೆಯಲ್ಲಿ ಸೀಗುತ್ತವೆ ಎಂದರೆ ಸಾಕ್ಷಿ ಕಂಪನಿಯ ಲೆಟರ್ ಹೆಡ್ ಮೇಲೆ authorized ಎಂದು ಸಹಿ ಇದ್ದರೆ ಮಾತ್ರ ಸದರಿ ಸೀಲಗಳನ್ನು ಮಾಡಿಕೊಡುತ್ತಾರೆ ಇಲ್ಲವಾದಲ್ಲಿ ಮಾಡಿಕೊಡುವುದಿಲ್ಲ. ಆರೋಪಿತರು ನಮ್ಮ ಕಂಪನಿಯ ಪರವಾಗಿ ಫೈನಾನ್ಸ ಪಡೆದು NOC ಪಡೆದ ವಿಷಯ ನನಗೆ ಹೊರಗಿನಿಂದ ಗೊತ್ತಾಗಿರುತ್ತದೆ. ಸಾಲ ತುಂಬಿದ ನಂತರ NOC ಇದೇ ರೀತಿ ಇರುತ್ತದೆ ಎಂದು ತೋರಿಸಲು ತನಿಖಾಧಿಕಾರಿಯವರಿಗೆ ದಾಖಲೆ ನೀಡಿರುತ್ತೇವೆ. NOC, ಮು ಮಾ 1 ಮತ್ತು 2 ಸೀಲಗಳನ್ನು ಅದೇ ರೀತಿ ನಿಪಿ.16 ದಾಖಲೆಯನ್ನು ನಾನೇ ತಯಾರಿಸಿದ್ದರೂ ಸಹ ಈಗ ನನ್ನ ಮೇಲೆ ಜವಾಬ್ದಾರಿ ಬರುತ್ತದೆ ಎಂದು ಅದನ್ನು ತಪ್ಪಿಸಲು ಆರೋಪಿತರ ಮೇಲೆ ಸುಳ್ಳು ಆಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ ಆರೋಪಿ ನಂ.2 ಪರ ವಕೀಲರು ಸಮಂಜಸ ಕಾರಣ ಇಲ್ಲದೇ ಇರುವುದರಿಂದ ಪಾಟಿಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

Sd/-
**(**ಶ್ರೀಮತಿ ದೀಪಾ ಜಿ ಮನೇರಕರ**)**
**3** ನೇ ಅಧಿಕ ಹಿ**.**ದಿ**.**ನ್ಯಾ**.**ಹುಬ್ಬಳ್ಳಿ**.**